# "ದಿನಾಂಕ:07.11.2020ರ ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.86ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು"

*********

ಮಾನ್ಯ ಅಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21, ದಿನಾಂಕ:21.09.2020ರಂತೆ ದಿನಾಂಕ:07.11.2020ರ ಬೆಳ್ಳಿಗೆ:11.00 ಗಂಟೆಗೆ ವಾರ್ಡ್ ನಂ.86ರ ವ್ಯಾಪ್ತಿಯ ವಾರ್ಡ್ ಸಮಿತಿ ಸಭೆಯ ನಡುವಳಿಗಳು. ಹಾಗೂ ಸದರಿ ಸಮಿತಿ ಸಭೆಗೆ ಹಾಜರಾದ ಅಧಿಕಾರಿ ಸಿಬ್ಬಂಧಿಗಳು, ಸದಸ್ಯರುಗಳ ವಿವರಗಳು ಈ ಕೆಳಕಂಡಂತ್ತಿವೆ.

| ಕ್ರಮ ಸಂಖ್ಯೆ | ಸಭೆಗೆ ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿಗಳು | ಹುದ್ದೆ |
|---|---|---|
| 1 | ಶ್ರೀ.ಅರುಣ್ | ಸ.ಕಾ.ಅ ಮತ್ತು (ನೋಡೆಲ್ ಅಧಿಕಾರಿಗಳು) |
| 2 | ಶ್ರೀ.ಸಿ.ಮುನಿಯಪ್ಪ | ಸಹಾಯಕ ಅಭಿಯಂತರರು (ವಾರ್ಡ್ 86) |
| 3 | ಶ್ರೀ.ಮೊಹಬೂಬ್ ಪಾಷ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ. ಹೆಚ್.ವಿ.ಶ್ರೀಧರ್ | ಕಂದಾಯ ಪರಿವೀಕ್ಷಕರು |
| 5 | ಶ್ರೀ.ಪಿ.ರಮೇಶ್ | ತೆರಿಗೆ ನಿರೀಕ್ಷಕರು |
| 6 | ಶ್ರೀ.ಸೋಮಶೇಖರ್ ಹೆಚ್.ಪಿ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 7 | ಶ್ರೀ.ಎಂ.ರಾಜು | ಕಾಮಗಾರಿ ಪರಿವೀಕ್ಷರು |
| 8 | ಶ್ರೀ.ರಘು ಬಿ.ವಿ | ಕೇಂದ್ರ ಕಛೇರಿ |

ಮಾನ್ಯ ನೋಡೆಲ್ ಅಧಿಕಾರಿಯವರು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಮುನ್ನಡೆಸಲಾಯಿತು.

1. ಈಗಾಗಲೇ ಕೋವಿಡ್-19 ಹೆಚ್ಚಾಗಿ ಹರಡುತ್ತಿರುವುದರಿಂದ ಎಲ್ಲಾ ಅಧಿಕಾರಿ ಸಿಬ್ಬಂಧಿಗಳಿಗೆ ಪ್ರತಿದಿನ ಕೋವಿಡ್ ಟೆಸ್ಟ್‌ಗಳನ್ನು ಹೆಚ್ಚು ಹೆಚ್ಚಾಗಿ ಕೈಗೊಳ್ಳಲು ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಕ್ಯಾಂಪ್‌ಗಳನ್ನು ಹಾಕಿ ಟೆಸ್ಟ್‌ಗಳನ್ನು ಮಾಡಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಯಿತು.

2. ಶ್ರೀ.ರಘು ಬಿ.ವಿ ರವರು ಮಾರತ್ತಹಳ್ಳಿ ವಾರ್ಡ್ ನಂ.86 ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ಸಂಬಂಧಿಸಿದಂತೆ ತೆರಿಗೆ ವಸೂಲಾತಿಯನ್ನು ಹೆಚ್ಚಿಸಲು ಕಂದಾಯ ಅಧಿಕಾರಿಗಳಿಗೆ ತಿಳಿಸಿದರು.

3. ಶ್ರೀ.ಸೋಮಶೇಖರ್ ಹೆಚ್.ಪಿ, ಸಹಾಯಕ ಅಭಿಯಂತರರು ಬೆಸ್ಕಾಂ ರವರು ಮಾರತ್ತಹಳ್ಳಿ ಟೆಂಪೋ ಸ್ಟಾಂಡ್ ಹತ್ತಿರ ಹೆಚ್ಚಾಗಿ ಕಸ ಹಾಕುತ್ತಿರುತ್ತಾರೆಂದು ತಿಳಿಸಲಾಗಿ, ಸದರಿ ಸ್ಥಳದಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಲು ಹಾಗೂ ದಂಡ ವಿಧಿಸಲು ಸೂಚಿಸಲಾಯಿತು.

4.ವಾರ್ಡ್‌ನಲ್ಲಿ ಓಡಾಡುವ ಸಾರ್ವಜನಿಕರಿಗೆ ಮಾಸ್ಕ್ ಧರಿಸಲು ಹಾಗೂ ಮಾಸ್ಕ್ ಧರಿಸದೆ ಇರುವ ಸಾರ್ವಜನಿಕರಿಗೆ ದಂಡ ವಿಧಿಸಲು ಮಾರ್ಷಲ್‌ಗಳಿಗೆ ಸೂಚಿಸಲಾಯಿತು. ಹಾಗೆಯೇ ಸಭೆಗೆ ಹಾಜರಿದ್ದ ಮಾರ್ಷಲ್‌ಗಳಿಗೆ ರಾತ್ರಿ ಸಮಯದಲ್ಲಿ ಕಸ ಬಿಸಾಡುವವರಿಗೆ ದಂಡ ವಿಧಿಸಲು ಸೂಚಿಸಲಾಯಿತು.

Scanned by TapScanner

5. ಪ್ರತಿ ರಸ್ತೆಯ ರಸ್ತೆ ಬದಿಯ ಬೀದಿ ದೀಪಗಳ ಪರಿವೀಕ್ಷಣೆ ನಡೆಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬೀದಿ ದೀಪಗಳ ದುರಸ್ಥಿಯನ್ನು ಕೈಗೊಳ್ಳಲು ಬೆಸ್ಕಾಂ ವಿಭಾಗಕ್ಕೆ ಸೂಚಿಸಲಾಯಿತು.

6. ವಾರ್ಡ್ ವ್ಯಾಪ್ತಿಯ Arterial and sub arterial roads ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಗುರುತಿಸಿ, ಈಗಾಗಲೇ ವೆಟ್‌ಮಿಕ್ಸ್ ತುಂಬಿರುವ ಬಗ್ಗೆ ಹಾಗೂ ಸದರಿ ವೆಟ್‌ಮಿಕ್ಸ್ ತುಂಬಿರುವ ಗುಂಡಿಗಳಿಗೆ ಅಸ್ಪಾಲ್ಟ್ ಹಾಕಲು ದಿನಾಂಕ:30.11.2020ರೊಳಗೆ ಪೂರ್ಣಗೊಳಿಸಲು ಸೂಚಿಸಲಾಯಿತು.

7. ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ OFC ಮತ್ತು ಅನಧೀಕೃತ ರಸ್ತೆ ಅಗೆತ ಕಂಡುಬಂದಲ್ಲಿ ಕೂಡಲೇ ದಂಡ ವಿಧಿಸಲು ಹಾಗೂ ಕೇಸ್ ದಾಖಲಿಸುವ ಬಗ್ಗೆ ಚರ್ಚಿಸಲಾಯಿತು.

8.ಮುಂದಿನ ಸಭೆಯಲ್ಲಿ ಪರಿಸರ ಇಲಾಖೆ, ತೋಟಗಾರಿಕೆ ಇಲಾಖೆ, ಪಶುಸಂಗೋಪನಾ ಇಲಾಖೆ, ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ, ಬೃಹತ್ ಮಳೆ ನೀರುಗಾಲುವೆ ವಿಭಾಗ ಮತ್ತು ರಸ್ತೆ ಮೂಲಭೂತ ಸೌಕರ್ಯ ವಿಭಾಗರವರನ್ನು ಸಭೆಗೆ ಆಹ್ವಾನಿಸುವ ಬಗ್ಗೆ ಚರ್ಚಿಸಲಾಯಿತು.

9.ಅನಧೀಕೃತ ಫ್ಲೆಕ್ಸ್/ಬ್ಯಾನರ್ಸ್ ಅಳವಡಿಸಿರುವುದನ್ನು ತೆರೆವುಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಮಾನ್ಯ ನೋಡೆಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಮತ್ತು ಸಹಾಯಕ ಅಭಿಯಂತರರು
ವಾರ್ಡ್ ನಂ. 86 ಮಾರತ್ತಹಳ್ಳಿ.

ಅಧ್ಯಕ್ಷರು
ನೋಡೆಲ್ ಅಧಿಕಾರಿ
ವಾರ್ಡ್ ನಂ. 86 ಮಾರತ್ತಹಳ್ಳಿ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ಬಿಬಿಎಂಪಿ ರವರ ಘನ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.

Scanned by TapScanner